ಕರ್ನಾಟಕ ಸರ್ಕಾರ

(ಜಿಲ್ಲಾ ಪಂಚಾಯತ್, ತುಮಕೂರು)

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಪಾವಗಡ ತಾಲ್ಲೂಕು ಪಾವಗಡ–561202**

ಸಂಖ್ಯೆ:ಸಿ.6.ಮಾ.ನ.ಬಗ್ಗೆ.87/2020–21 ದಿನಾಂಕ: 05–10–2020

**ಕರ್ನಾಟಕ ಶಿಕ್ಷಣ ಮಸೂದೆ 1983**

**ನಮೂನೆ–1**

**(ನಿಯಮ–9)**

**ವಿಷಯ:–** ದಿ. ನ್ಯೂ ಎಂಪ್ರೈಸ್ ಕಿರಿಯ ಪ್ರಾಥಮಿಕ ಶಾಲೆ ಲಿಂಗದಹಳ್ಳಿ ಪಾವಗಡ ತಾಲ್ಲೂಕು ಶಾಲೆಯ ಮಾನ್ಯತೆ ನವೀಕರಣ ಕುರಿತು.

**ಉಲ್ಲೇಖ:–** 1 ಸರ್ಕಾರಿ ಆ.ಸಂಖ್ಯೆ ಇಡಿ 71 ವಿವಿಧ 92 ದಿನಾಂಕ:8–10–1988.

2 ಸರ್ಕಾರಿ ಆ.ಸಂಖ್ಯೆ ಇಡಿ 114 ವಿವಿಧ 98 ದಿನಾಂಕ:4–11–2009

3 ಆಯುಕ್ತರು ಸಾ.ಶಿ.ಇ. ಬೆಂಗಳೂರು ರವರ ಸುತ್ತೋಲೆ ಸಂ.ಶಾ.ಶಿ.ಅ./ಆರ್ಥಿಕ ವಿಭಾಗ 2001–02 ದಿನಾಂಕ 17–08–2002.

4 ಕರ್ನಾಟಕ ಶಿಕ್ಷಣ ಮಸೂದೆ 1983 (1995– ಕರ್ನಾಟಕ ಆಕ್ಟ್–1ರ) ಪ್ರಕಾರ ಭಾಗ 14ರ ನಿಯಮ 3 ಮತ್ತು 38 ರಂತೆ.

5 ಸರ್ಕಾರಿ ಆ.ಸಂಖ್ಯೆ ಇಡಿ 114 ವಿವಿಧ 2005 ದಿನಾಂಕ:2–11–2001.

6. ಕಾರ್ಯದರ್ಶಿಗಳು ನಂದಗೋಕುಲ ಎಜುಕೇಷನಲ್ & ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್ ಲಿಂಗದಹಳ್ಳಿ ಪಾವಗಡ ತಾಲ್ಲೂಕು ಇವರ ಪ್ರಸ್ತಾವನೆಯಂತೆ.

7. ಕ್ಷೇತ್ರ ಶಿಕ್ಷಣಾಧಿಕಾರಿಗಳು ಪಾವಗಡ ರವರ ಸ್ಥಳ ಪರಿಶೀಲನಾ ವರದಿ.

*******

ದಿ. ನ್ಯೂ ಎಂಪ್ರೈಸ್ ಕಿರಿಯ ಪ್ರಾಥಮಿಕ ಶಾಲೆ ಲಿಂಗದಹಳ್ಳಿ, ಪಾವಗಡ ತಾಲ್ಲೂಕು ಶಾಲೆಗೆ ಉಲ್ಲೇಖ (1) ರಿಂದ (7) ರಂತೆ ಹೊಸ ಶಿಕ್ಷಣ ಮಸೂದೆ 1983 (1995 – ಕರ್ನಾಟಕ ಆಕ್ಟ್–1ರ) ಪ್ರಕಾರ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಾನ್ಯತೆ ನವೀಕರಿಸಿದೆ.

| | | | | |
|---|---|---|---|---|
| 1 | ಶಿಕ್ಷಣ ಮಸೂದೆ 1983 ರಂತೆ ಶಾಲಾ ನೊಂದಣಿ ಸಂಖ್ಯೆ | ಮಾನ್ಯ ಆಯುಕ್ತರು ಸಾ.ಶಿ.ಇ. ಬೆಂಗಳೂರು ಇವರ ನೊಂದಣಿ ಸಂಖ್ಯೆ ಸಿ.7.(6).ಪ್ರಾ.ಶಿ.ಅ.1–5 ಆಂ.ಮಾ.ಪ.02/2015–16 ದಿನಾಂಕ 22.06.2016. ಪರಿಷ್ಕರಿಸಲ್ಪಟ್ಟ ನೊಂದಣಿ ಪ್ರಮಾಣ ಪತ್ರ ಕ್ರಮ ಸಂಖ್ಯೆ 14/2016–17 | | |
| 2 | ಶಾಲಾ ಆಡಳಿತ ಮಂಡಳಿ ಹೆಸರು ಮತ್ತು ವಿಳಾಸ | ನಂದಗೋಕುಲ ಎಜುಕೇಷನಲ್ & ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್ ಲಿಂಗದಹಳ್ಳಿ, ಪಾವಗಡ ತಾಲ್ಲೂಕು. | | |
| 3 | ಶಾಲೆಯ ಹೆಸರು ಮತ್ತು ವಿಳಾಸ | ದಿ. ನ್ಯೂ ಎಂಪ್ರೈಸ್ ಕಿರಿಯ ಪ್ರಾಥಮಿಕ ಶಾಲೆ ಲಿಂಗದಹಳ್ಳಿ, ಪಾವಗಡ ತಾಲ್ಲೂಕು | | |
| 4 | ಪ್ರಸ್ತುತ ಮಾನ್ಯತೆ ನೀಡಿದ ವಿವರ | ತರಗತಿ | ವಿಭಾಗ | ಮಾಧ್ಯಮ |
| | | 1 ರಿಂದ 5 | ಪ್ರತಿ ತರಗತಿಗೆ ಒಂದೊಂದು ವಿಭಾಗಕ್ಕೆ ಮಾತ್ರ. | ಆಂಗ್ಲ |
| 5 | ಮಾನ್ಯತೆ ಅವಧಿ | 2020–21 ರಿಂದ 2022–23 | | |
| 6 | ಮಾನ್ಯತೆ ವಿಧಾನ | ಶಾಶ್ವತ ಅನುದಾನ ರಹಿತವಾಗಿ | | |

ಪುಟ–2...ಕ್ಕೆ

ಷರತ್ತುಗಳು:-

1. ಶಿಕ್ಷಣ ಮಸೂದೆಯಂತೆ ಶಾಲೆಯ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಮತ್ತು ಗುಣಾತ್ಮಕ ಶಿಕ್ಷಣಕ್ಕೆ ಪೂರಕವಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಪೂರೈಸತಕ್ಕದ್ದು.
2. ಸಂಸ್ಥೆಯ ಹಾಗೂ ಶಾಲೆಯ ಆಡಳಿತ ಮಂಡಳಿಯ ನವೀಕರಣ ಹಾಗೂ ಸಂಸ್ಥೆ ಆಡಿಟ್ ವರದಿಯನ್ನು ಪ್ರತಿ ವರ್ಷವು ಹೊಂದಿರತಕ್ಕದ್ದು.
3. ಸರ್ಕಾರಿ ಆದೇಶ ಮತ್ತು ಇಲಾಖಾ ಸುತ್ತೋಲೆಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಹಾಗೂ ವಿದ್ಯಾರ್ಥಿಗಳ ಅಗತ್ಯತೆಗೆ ತಕ್ಕಂತೆ ಪೀಠೋಪಕರಣಗಳನ್ನು ಹೊಂದಿರತಕ್ಕದ್ದು.
5. ವಿಧ್ಯಾರ್ಥಿಗಳ ದಾಖಲಾತಿ ಮತ್ತು ಹಾಜರಾತಿಯನ್ನು ಉತ್ತಮಪಡಿಸಿಕೊಳ್ಳತಕ್ಕದ್ದು.
6. ಶಾಲೆಯ ಹೆಸರಿನಲ್ಲಿ ಸ್ವಂತ ಕಟ್ಟಡ ಹಾಗೂ ಆಟದ ಮೈದಾನ ಕಡ್ಡಾಯವಾಗಿ ಹೊಂದಿರ ತಕ್ಕದ್ದು.
7 ನಿಗದಿತ ಮೊತ್ತದ ಭದ್ರತಾ ಠೇವಣಿಯನ್ನು ಸಂಬಂಧಿಸಿದ ಪ್ರಾಧಿಕಾರ ಹಾಗೂ ಶಾಲೆಯ ಹೆಸರಿನಲ್ಲಿ ಜಂಟಿ ಖಾತೆಯಲ್ಲಿ ಹೊಂದಿರತಕ್ಕದ್ದು.
8 ಕರ್ನಾಟಕ ಸರ್ಕಾರದ ಪಠ್ಯಕ್ರಮ ಹಾಗೂ ಇಲಾಖೆ ನಿಗಧಿ ಪಡಿಸಿದ ವೇಳಾ ಪಟ್ಟಿಯನ್ನು ಪಾಲಿಸತಕ್ಕದ್ದು.
9. ಶಿಕ್ಷಣ ಮಸೂದೆಯಂತೆ ಗುಣಾತ್ಮಕ ಶಿಕ್ಷಣಕ್ಕೆ ಪೂರಕವಾದ ಗ್ರಂಥಾಲಯ ವಿಜ್ಞಾನೋಪಕರಣ, ಪಾಠೋಪಕರಣ ಎಲ್ಲಾ ಸೌಲಭ್ಯಗಳನ್ನು ವಿದ್ಯಾರ್ಥಿಗಳ ಅಗತ್ಯತೆಗೆ ತಕ್ಕಂತೆ ಹೊಂದಿರತಕ್ಕದ್ದು.
10 ಮಕ್ಕಳ ದಾಖಲಾತಿ ಹಾಜರಾತಿ 50:40:1 ರ ಅನುಪಾತದಲ್ಲಿರಬೇಕು.
11. ಸಲ್ಲಿಸಿರುವ ದಾಖಲೆಗಳಲ್ಲಿ ಯಾವುದಾದರೂ ತಪ್ಪು ಹಾಗೂ ಸುಳ್ಳು ಮಾಹಿತಿ ಇದ್ದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೇ ಈ ಮಾನ್ಯತೆ ಆದೇಶ ತಂತಾನೇ ರದ್ದಾಗುತ್ತದೆ.
12 ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಪ್ರಕಾರ ಎಲ್ಲಾ ಅವಶ್ಯಕತೆಗಳನ್ನು ಶಾಲಾ ಆಡಳಿತ ಮಂಡಳಿಯವರು ತಕ್ಷಣ ಪೂರೈಸಬೇಕು.
13. ಸೇವಾ ಭದ್ರತೆಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
14. ಕನ್ನಡವನ್ನು ಕಡ್ಡಾಯವಾಗಿ ಕಲಿಸತಕ್ಕದ್ದು

ಈ ಮೇಲ್ಕಂಡ ಎಲ್ಲಾ ಷರತ್ತುಗಳನ್ನು ಕೂಡಲೇ ಪೂರೈಸದಿದ್ದಲ್ಲಿ ಈಗ ನೀಡಿರುವ ಶಾಲಾ ಮಾನ್ಯತೆಯನ್ನು ಯಾವುದೇ ಸಂದರ್ಭದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೇ ಹಿಂಪಡೆಯಲಾಗುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಪಾವಗಡ

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಪಾವಗಡ ತಾಲ್ಲೂಕ್, ಪಾವಗಡ
5/10/20

ಪ್ರತಿಯನ್ನು:-

1. ಕಾರ್ಯದರ್ಶಿಗಳು ನಂದಗೋಕುಲ ಎಜುಕೇಷನಲ್ & ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್ ಲಿಂಗದಹಳ್ಳಿ, ಪಾವಗಡ ತಾಲ್ಲೂಕು. ಇವರ ಅಗತ್ಯ ಕ್ರಮಕ್ಕಾಗಿ.
2. ಮುಖ್ಯ ಶಿಕ್ಷಕರು ದಿ. ನ್ಯೂ ಎಂಪ್ರೈಸ್ ಕಿರಿಯ ಪ್ರಾಥಮಿಕ ಶಾಲೆ ಲಿಂಗದಹಳ್ಳಿ, ಪಾವಗಡ ತಾಲ್ಲೂಕು. ಇವರ ಅಗತ್ಯ ಕ್ರಮಕ್ಕಾಗಿ
3. ಕಛೇರಿ ಪ್ರತಿ

